MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - MONDAY 15-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ದರ ದುರ್ಬಲ

ಜಾಗತಿಕ ಸೋಯಾ ಎಣ್ಣೆ ಉತ್ಪಾದನೆ ಹೆಚ್ಚಳದ ನಿರೀಕ್ಷೆಯಿಂದ ಮಲೇಶೀಯನ್ ಪಾಮೆಣ್ಣೆ ದರ ದುರ್ಬಲಗೊಂಡು 0.44 ಶೇಕಡಾ ಟನ್‌ಗೆ 16 ರಿಂಗಿಟ್ಸ್ ಇಳಿಕೆಯಾಗಿ 3632 ರಿಂಗಿಟ್ಸ್ ($ 818.84) ಆಗಿದೆ. ಅಮೇರಿಕಾದಲ್ಲಿ ಎರಡೂ ಬೆಳೆಗಳಲ್ಲಿ ಅಧಿಕ ಸೋಯಾಬೀನ್ ಉತ್ಪಾದನೆ, ಸೋಯಾಬೀನ್, ಸೋಯಾ ಎಣ್ಣೆ ದರ ಇಳಿಕೆಯ ಪರಿಣಾಮವಾಗಿ ಪಾಮೆಣ್ಣೆ ದರ ದುರ್ಬಲ ಗೊಂಡಿದೆ.

## ಕೇರಳದ ಗೋಡಂಬಿ ಸಂಸ್ಕರಣಾ ಉದ್ಯಮ ಚೇತರಿಕೆಗೆ ಯೋಜನೆಗಳು

ಕೇರಳ ರಾಜ್ಯದ ಗೋಡಂಬಿ ಅಬಿವೃದ್ಧಿ ಕಾರ್ಪೋರೇಷನ್ ( KSTDC) ಕೇರಳದ ಗೋಡಂಬಿ ಸಂಸ್ಕರಣಾ ಉದ್ಯಮ ಚೇತರಿಕೆಗಾಗಿ ಬಜೆಟ್‌ನಲ್ಲಿ ಗೋಡಂಬಿ ಉದ್ಯಮ ಅಭಿವೃದ್ಧಿಗೆ ಮೀಸಲಿರಿಸಿದ ರೂ.37 ಕೋಟಿ ಯೋಜನೆಯಲ್ಲಿ ಹಲವಾರು ಕ್ರಮಗಳನ್ನು ಪ್ರಕಟಿಸಿದೆಯೆನ್ನಲಾಗಿದೆ. ಆಫ್ರಿಕಾದಲ್ಲಿ ಗೋಡಂಬಿ ಪ್ಲಾಂಟೇಶನ್‌ಗಳ ಖರೀದಿ ಮಾಡಿ ಕಚ್ಚಾ ಗೋಡಂಬಿ ಪೂರೈಕೆಯನ್ನು ಸ್ವರ್ಧಾತ್ಮಕ ದರದಲ್ಲಿ ಪೂರೈಸುವುದು, ಖಾಸಗಿ ಸಂಸ್ಕರಣೆದಾರರ 50 ಶೇಕಡಾ ಸಾಲಿನ ಅಸಲನ್ನು ಪಾವತಿಸಲು ಸಹಾಯ, ಖಾಸಗಿ ಸಂಸ್ಕರಣೆದಾರರ ಕಾರ್ಮಿಕರಿಗೆ ಇ.ಎಸ್.ಐ ಹಾಗೂ ಪಿ.ಎಫ್ ಸೌಲಭ್ಯಗಳು ಮುಂತಾದ ಯೋಜನೆಗಳನ್ನು ಆರಂಭಿಸಲಿದೆಯೆನ್ನಲಾಗಿದೆ.

## ಭಾರತ ಜಾಗತಿಕ 4 ನೇ ಅತಿದೊಡ್ಡ ಜೋಳ ಕೃಷಿ ಪ್ರದೇಶ ಹಾಗೂ 6ನೇ ಅತಿ ದೊಡ್ಡ ಉತ್ಪಾದಕ

ಜಾಗತಿಕ ಜೋಳ ಕೃಷಿ ಪ್ರದೇಶದಲ್ಲಿ ಭಾರತ 4 ನೇ ಸ್ಥಾನ ಹಾಗೂ ಉತ್ಪಾದನೆಯಲ್ಲಿ 6ನೇ ಸ್ಥಾನದಲ್ಲಿದೆಯೆನ್ನಲಾಗಿದೆ. ಒಟ್ಟು ಜಾಗತಿಕ ಜೋಳ ಕೃಷಿ ಪ್ರದೇಶದ 3.96 ಶೇಕಡಾ ಪ್ರದೇಶದಲ್ಲಿ ಭಾರತದಲ್ಲಿ ಬೆಳೆಯಲಾಗುತ್ತಿದ್ದು ಒಟ್ಟು ಜಾಗತಿಕ ಉತ್ಪಾದನೆಯ 2.13 ಶೇಕಡಾವೆನ್ನಲಾಗಿದೆ. ಯು.ಎಸ್.ಎ ಜಾಗತಿಕ 32 ಶೇಕಡಾ ಉತ್ಪಾದನೆಯೊಂದಿಗೆ ಪ್ರಥಮ ಸ್ಥಾನದಲ್ಲಿದ್ದು, 23 ಶೇಕಡಾ ಉತ್ಪಾದನೆಯೊಂದಿಗೆ ಚೀನಾ 2ನೇ ಸ್ಥಾನ, 7 ಶೇಕಡಾ ಉತ್ಪಾದನೆಯೊಂದಿಗೆ ಬ್ರೆಜಿಲ್ 3 ನೇಸ್ಥಾನ, 5 ಶೇಕಡಾ ಉತ್ಪಾದನೆಯೊಂದಿಗೆ ಅರ್ಜೆಂಟಿನಾ, 4ನೇ ಮತ್ತು 3 ಶೇಕಡಾ ಉತ್ಪಾದನೆಯೊಂದಿಗೆ ಉಕ್ರೈನ್ 5ನೇ ಸ್ಥಾನ ಹೊಂದಿದೆಯೆನ್ನಲಾಗಿದ್ದು, ಇವುಗಳಿಂದ ಒಟ್ಟು ಜಾಗತಿಕ 70 ಶೇಕಡಾ ಜೋಳ ಉತ್ಪಾದನೆಯಾಗುತ್ತಿದೆಯೆನ್ನಲಾಗಿದೆ. 2021 ರಲ್ಲಿ ಜೋಳದ ಜಾಗತಿಕ ವ್ಯವಹಾರ $ 52 ಬಿಲಿಯನ್ ತಲುಪಿದೆಯೆನ್ನಲಾಗಿದ್ದು, 155 ರಾಷ್ಟ್ರಗಳಲ್ಲಿ ವ್ಯವಹಾರದ ವ್ಯಾಪಿಸಿದೆ. ಯು.ಎಸ್ 37 ಶೇಕಡಾ ಜಾಗತಿಕ ರಫ್ತು, ಅರ್ಜೆಂಟಿನಾ 17 ಶೇಕಡಾ, ಉಕ್ರೈನ್ 11 ಶೇಕಡಾ, ಬ್ರೆಜಿಲ್ 8 ಶೇಕಡಾ ಮತ್ತು ಫ್ರಾನ್ಸ್ 4 ಶೇಕಡಾ ಜಾಗತಿಕ ರಫ್ತಿನೊಂದಿಗೆ ಒಟ್ಟು 77 ಶೇಕಡಾ ಜಾಗತಿಕ ರಫ್ತು ಪಾಲು ಹೊಂದಿದೆಯೆನ್ನಲಾಗಿದೆ. ಭಾರತ 2021 ರಲ್ಲಿ 24 ಸಾವಿರ ಟನ್ ಜೋಳ ಆಮದು ಮಾಡಿದೆಯೆನ್ನಲಾಗಿದೆ. ಒಟ್ಟು ಭಾರತದ ರಫ್ತು 3.62 ಮಿಲಿಯನ್ ಟನ್ ಆಗಿದ್ದು $ 935.61 ಮಿಲಿಯನ್ ಮೌಲ್ಯದಾಗಿದೆಯೆನ್ನಲಾಗಿದೆ.